KATK010056102023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಸಂ.125/2023**

ಪ್ರಾ.ಸಾ. ಃ **22**

ದೋ.ಸಾ. ಃ **32**

ದಿ.**24.10.2025**

ಹೆಸರು ಃ ಕಿಶೋರ್ ಜೆ.ಎನ್.

ತಂದೆಯ ಹೆಸರು ಃ ನರಸಿಂಹರಾಜು ಜೆ.ಬಿ.

ವಯಸ್ಸು ಃ **31** ವರ್ಷ

ಉದ್ಯೋಗ ಃ ಪೋಲೀಸ್ ಪೇದೆ **627,** ಹೆಬ್ಬೂರು ಪೋಲೀಸ್ ಠಾಣೆ

ವಾಸಸ್ಥಳ ಃ ಹೆಬ್ಬೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ದಿನಾಂಕ.16.10.2020 ರಿಂದ ನಾನು ಹೆಬ್ಬೂರು ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿನಾಂಕ.20.03.2023 ರಂದು ಕ್ಯಾತ್ಸಂದ್ರ ವೃತ್ತದ ಸಿಪಿಐ ರವರಾದ ಶ್ರೀ ಚನ್ನೇಗೌಡ ಆರ್.ಜಿ.ರವರು ಈ ಪ್ರಕರಣದಲ್ಲಿ ತುಮಕೂರು ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಪಾಂಡುರಂಗ ಅಲಿಯಸ್ ಗಿರೀಶರವರ ಮೃತದೇಹದ ತನಿಖೆ ಸಂದರ್ಭದಲ್ಲಿ ಇಲಾಖೆಯ ಸೋನಿ ಹ್ಯಾಂಡ್ ಕ್ಯಾಮ್ ಕ್ಯಾಮೆರಾವನ್ನು ಕೊಟ್ಟು ಫೋಟೋ ತೆಗೆಯಲು ಮತ್ತು ವಿಡಿಯೋ ಮಾಡಲು ಹೇಳಿದರು. ಆ ಪ್ರಕಾರ ನಾನು ಫೋಟೋ ತೆಗೆದಿರುತ್ತೇನೆ ಮತ್ತು ವಿಡಿಯೋ ಮಾಡಿರುತ್ತೇನೆ. ಆ ಫೋಟೋಗಳನ್ನು ಈಗ ನೋಡುತ್ತಿದ್ದು ನಿಶಾನೆ ಪಿ15 ರಿಂದ 24 ಎಂದು ಈಗಾಗಲೇ ಗುರುತಿಸಲಾಗಿದೆ.
3. ದಿ.22.03.2023 ರಂದು ಬೆಳಿಗ್ಗೆ 11.00 ಗಂಟೆಗೆ ಘಟನಾ ಸ್ಥಳದ ಪಂಚನಾಮೆ

ಮಾಡುವ ಕಾಲಕ್ಕೆ ನಾನು ಹಾಜರಿದ್ದು ಸೋನಿ ಹ್ಯಾಂಡ್ ಕ್ಯಾಮ್ ಕ್ಯಾಮೆರಾದಲ್ಲಿ ಸ್ಥಳದ ಪಂಚನಾಮೆ ಮಾಡುವ ಕಾಲಕ್ಕೆ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಮಾಡುವ ಕಾಲಕ್ಕೆ ಫೋಟೋಗಳನ್ನು ತೆಗೆದಿರುತ್ತೇನೆ ಮತ್ತು ವಿಡಿಯೋ ಮಾಡಿರುತ್ತೇನೆ. ಆ ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಶಾನೆ ಪಿ2 ಮತ್ತು 3 ಎಂದು ಗುರುತಿಸಲಾಗಿದೆ.

4. ಅದೇ ದಿನ ಆರೋಪಿಗೆ ವೈದ್ಯಕೀಯ ಪರೀಕ್ಷೆ ಮತ್ತು ಕೋವಿಡ್ ಪರೀಕ್ಷೆ ನಡೆಸಲು ತನಿಖಾಧಿಕಾರಿಗಳು ಹೇಳಿದ ಮೇರೆಗೆ ಆತನಿಗೆ ವೈದ್ಯಕೀಯ ಪರೀಕ್ಷೆ ಮಾಡಿಸಿ, ಆತನ ರಕ್ತದ ಗುಂಪನ್ನು ಪರೀಕ್ಷಿಸಿ ವರದಿ ನೀಡಲು ವೈದ್ಯರಿಗೆ ಹೇಳಿರುತ್ತೇನೆ ಮತ್ತು ಆರೋಪಿಯ ಮೈ ಮೇಲಿನ ಬಟ್ಟೆಗಳನ್ನು ವೈದ್ಯರಿಗೆ ಪತ್ರವನ್ನು ಕೊಟ್ಟು ಸಂಗ್ರಹಿಸಲು ಹೇಳಿ, ವೈದ್ಯಾಧಿಕಾರಿಗಳು ಆತನ ಮೈ ಮೇಲಿದ್ದ ಬಟ್ಟೆಗಳನ್ನು ತೆಗೆದು, ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಸೀಲ್ ಮಾಡಿ ಕೊಟ್ಟಿದ್ದನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇನೆ. ಆ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ48 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ48(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ತೆಗೆದ ಫೋಟೋಗಳನ್ನು ಈಗಾಗಲೇ ನಿಶಾನೆ ಪಿ10 ಮತ್ತು 11 ಎಂದು ಗುರುತಿಸಲಾಗಿದೆ. ಈ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ಅಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಆ ದೃಢೀಕರಣ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ49 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ49(ಎ) ಎಂದು ಗುರುತಿಸಲಾಯಿತು. ಆರೋಪಿ ಅಣ್ಣಪ್ಪಸ್ವಾಮಿ ಈಗ ವಿಸಿಯಲ್ಲಿ ಕಂಡುಬರುತ್ತಿದ್ದಾನೆ.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

5. ಸೋನಿ ಹ್ಯಾಂಡಿ ಕ್ಯಾಮ್ ಕ್ಯಾಮೆರಾ ಪೋಲೀಸ್ ನಿರೀಕ್ಷಕರ ಹತ್ತಿರ ಇರುತ್ತದೆ. ಆ ಕ್ಯಾಮೆರಾವನ್ನು ನಾನು ಅಥವಾ ಬೇರೆ ಪೋಲೀಸ್ ಪೇದೆಯವರು ಆದೇಶದ ಮೇರೆಗೆ ಉಪಯೋಗಿಸುತ್ತೇವೆ. ಇಲಾಖೆಯಿಂದ ನಮಗೆ ಹ್ಯಾಂಡಿ ಕ್ಯಾಮ್ ಕ್ಯಾಮೆರಾ ಉಪಯೋಗಿಸುವ ಬಗ್ಗೆ ತರಬೇತಿ ಕೊಟ್ಟಿದ್ದಾರೆ. ಅದರ ಬಗ್ಗೆ ಪ್ರಮಾಣಪತ್ರ ಇರುವುದಿಲ್ಲ. ನನಗೆ ಆ ಕ್ಯಾಮೆರಾ ಉಪಯೋಗಿಸುವ ಬಗ್ಗೆ

ಯಾವುದೇ ಪರಿಣತಿ ಇಲ್ಲ ಎಂದರೆ ಸರಿಯಲ್ಲ. ದಿನಾಂಕ.20.03.2023 ರಂದು ಮೃತದೇಹದ ತನಿಖೆಯ ಸಮಯದಲ್ಲಿ ಫೋಟೋ ತೆಗೆದು, ವಿಡಿಯೋ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ.22.03.2023 ರಂದು ಘಟನಾ ಸ್ಥಳದಲ್ಲಿ ಪಂಚನಾಮೆ ಕಾಲಕ್ಕೆ ಫೋಟೋ ತೆಗೆದು, ವಿಡಿಯೋ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ2 ಮತ್ತು 3 ನ್ನು ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಪರೀಕ್ಷೆ ನಡೆಸಲು ಮತ್ತು ಆರೋಪಿಯ ಬಟ್ಟೆಗಳನ್ನು ಸಂಗ್ರಹಿಸಲು ನನಗೆ ಲಿಖಿತ ಆದೇಶ ಕೊಟ್ಟಿಲ್ಲ, ಮೌಖಿಕ ಆದೇಶ ಕೊಟ್ಟಿರುತ್ತಾರೆ. ನನಗೆ ತನಿಖಾಧಿಕಾರಿ ಕೊಟ್ಟ ಪತ್ರವನ್ನು ವೈದ್ಯರಿಗೆ ಕೊಟ್ಟಿದ್ದೇನೆ. ಆರೋಪಿಗೆ ವೈದ್ಯಕೀಯ ಪರೀಕ್ಷೆ ಮತ್ತು ಕೋವಿಡ್ ಪರೀಕ್ಷೆ ನಡೆಸಲು ತನಿಖಾಧಿಕಾರಿಗಳು ಹೇಳಿದ ಮೇರೆಗೆ ಆತನಿಗೆ ವೈದ್ಯಕೀಯ ಪರೀಕ್ಷೆ ಮಾಡಿಸಿ, ಆತನ ರಕ್ತದ ಗುಂಪನ್ನು ಪರೀಕ್ಷಿಸಿ ವರದಿ ನೀಡಲು ವೈದ್ಯರಿಗೆ ಹೇಳಿರುತ್ತೇನೆ ಮತ್ತು ಆರೋಪಿಯ ಮೈ ಮೇಲಿನ ಬಟ್ಟೆಗಳನ್ನು ವೈದ್ಯರಿಗೆ ಪತ್ರವನ್ನು ಕೊಟ್ಟು ಸಂಗ್ರಹಿಸಲು ಹೇಳಿ, ವೈದ್ಯಾಧಿಕಾರಿಗಳು ಆತನ ಮೈ ಮೇಲಿದ್ದ ಬಟ್ಟೆಗಳನ್ನು ತೆಗೆದು, ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಸೀಲ್ ಮಾಡಿ ಕೊಟ್ಟಿದ್ದನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ10 ಮತ್ತು 11 ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ48 ನ್ನು ತನಿಖಾಧಿಕಾರಿಯವರ ಕಚೇರಿಯಲ್ಲಿ ಟೈಪ್ ಮಾಡಿಸಿದ್ದೇನೆ, ಅದೇ ದಿನ ಸಂಜೆ ವರದಿಯನ್ನು ಕೊಟ್ಟಿದ್ದೇನೆ. ನಿಶಾನೆ ಪಿ48 ರಲ್ಲಿ ದಿನಾಂಕವನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಶಾನೆ ಪಿ49 ನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು